ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಸಂಡೂರು.

**OS. No. 96/ 2019 P.W. 01**

ದಿನಾಂಕ **13-01-2023** ರಂದು ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀ ಸವಾಲು ಶ್ರೀ ಎ ವಿ ಕೆ ವಕೀಲರಿಂದ**

* * * *

ಈ ದಾವೆಯನ್ನು ಹನುಮಕ್ಕ ಮತ್ತು ಅವರ ಮಕ್ಕಳ ವಿರುದ್ದ ಹೂಡಿರುತ್ತೇನೆ. ನಾನು ಹನುಮಕ್ಕ ಅವರ ವಿರುದ್ದ ದಾವೆಯನ್ನು ಹೂಡಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಅತೀಕ್ರಮಣ ಮಾಡಿದ ಕಾರಣ ಅದನ್ನು ಬಿಡಿಸಲು ಈ ದಾವೆಯನ್ನು ಹಾಕಿರುತ್ತೇನೆ. ದಾವಾ ಸ್ವತ್ತು ಮನೆ ಆಗಿರುತ್ತದೆ. ದಾವಾ ಸ್ವತ್ತಿನ ಮನೆಯ ನಂಬರ 180 ಅದು 2 ನೇ ವಾರ್ಡ್ ನಲ್ಲಿ ಇರುತ್ತದೆ. ಸದರಿ ಮನೆ ಪೂರ್ವ ಪಶ್ಚಿಮ 6.5 ಗಜ ಉತ್ತರ ದಕ್ಷಿಣ 9 ಗಜ ಇರುತ್ತದೆ ಇದರ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ರಂಗಪ್ಪ ಅವರ ಮನೆ, ಉತ್ತರ ದೊಡ್ಡ ಬಸಪ್ಪ ಅವರ ಮನೆ ಮತ್ತು ದಕ್ಷಿಣಕ್ಕೆ ಹನುಮಕ್ಕ ಅವರ ಮನೆ ಇರುತ್ತದೆ. ನಾನು ದಾವಾ ಸ್ವತ್ತಿನಲ್ಲಿ ಡೋರ ನಂಬರ ಮತ್ತು ವಾರ್ಡ್ ನಂಬರ ಹಾಕಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ನಮ್ಮ ತಾತನಿಂದ ಬಂದಿರುತ್ತದೆ ನಮ್ಮ ತಾತನ ಹೆಸರು ಕಪ್ಪುಗಲ್ಲ ಈರಣ್ಣ. ನಮ್ಮ ತಾತ ಸದರಿ ಆಸ್ತಿಯನ್ನು ದೊಡ್ಡ ಬಸಪ್ಪ ಅವರಿಂದ ನೋಂದಾಯಿತ ದಾಖಲೆಯ ಮುಖಾಂತರ ಖರೀದಿ ಮಾಡಿರುತ್ತಾರೆ. ನಾನು ನಮ್ಮ ತಾತ ಖರೀದಿ ಮಾಡಿರುವ ಖರೀದಿ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಿಪಿ 1 ರಲ್ಲಿ ಡೋರ ನಂಬರ 180 ಮತ್ತು ವಾರ್ಡ ನಂಬರ 2 ಎಂದು ನಮೂದು ಆಗಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಪೂರ್ವ ಪಶ್ಚಿಮ 21.45 ಅಡಿ ಇರುವುದಿಲ್ಲ ಅದು ಕೇವಲ 19.5 ಅಡಿ ಇರುತ್ತದೆ ಎಂದರೆ ಸರಿಯಲ್ಲ. ಉತ್ತರ ದಕ್ಷಿಣ 29.97 ಇರುವುದಿಲ್ಲ ಅದು ಕೇವಲ 20 ಅಡಿ ಮಾತ್ರ ಇರುತ್ತದೆ ಎಂದರೆ ಸರಿಯಲ್ಲ. ಸದರಿ ವಿಸ್ತೀರ್ಣವನ್ನು ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಖರೀದಿಸಿದ ನಂತರ ನಮ್ಮ ತಾತನ ಹೆಸರಿನಲ್ಲಿ ಹಕ್ಕು ಬದಲಾವಣೆ ಆಗಿರುತ್ತದೆ. ಸದರಿ ಖಾತೆಯ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ಖಾತೆಯ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜುರಪಡಿಸಿರುವುದಿಲ್ಲ ಎಂರದೆ ಸರಿಯಲ್ಲ. ನಮ್ಮ ತಾತ ತೀರಿಕೊಂಡಿರುತ್ತಾರೆ ಅವರಿಗೆ ಒಟ್ಟು ಇಬ್ಬರು ಮಕ್ಕಳು ಅವರೂಗಳೆಂದರೆ ಈರಪ್ಪ ಮತ್ತು ಹನುಮಂತಪ್ಪ. ನಮ್ಮ ತಾತ ತೀರಿಕೊಂಡ ನಂತರ ಈರಪ್ಪ ಮತ್ತು ಹನಮಂತಪ್ಪ ಅವರ ಹೆಸರಿನಲ್ಲಿ ಹಕ್ಕು ಬದಲಾವಣೆ

ಆಗಿರುವುದಿಲ್ಲ. ಈರಪ್ಪ ಮತ್ತು ಹನುಮಂತಪ್ಪ ಅವರು ಮರಣ ಹೊಂದಿರುತ್ತಾರೆ. ಸದರಿ ಈರಪ್ಪ ಅವರಿಗೆ 3 ಜನ ಗಂಡ ಮಕ್ಕಳು ಮತ್ತು 3 ಜನ ಹೆಣ್ಣು ಮಕ್ಕಳು ಅವರೂಗಳೆಂದರೆ ಗೌರಮ್ಮ, ಮಲ್ಲಮ್ಮ, ಲಕ್ಷ್ಮೀದೇವಿ, ನಾಗರಾಜ, ರಾಮಾಂಜನಿ ಮತ್ತು ಹೊನ್ನುರಸ್ವಾಮಿ. ಹನುಮಂತಪ್ಪ ಅವರಿಗೆ ಇಬ್ಬರು ಮಕ್ಕಳು ಅವರು ಬಸವರಜಾ ಮತ್ತು ಕರಿಬಸಮ್ಮ. ಹನುಮಂತಪ್ಪ ಮತ್ತು ಈರಪ್ಪ ತೀರಿಕೊಂಡ ನಂತರ ಅವರ ಮಕ್ಕಳ ಹೆಸರಿಗೆ ಸುಮಾರು 15 ವರ್ಷಗಳ ಹಿಂದೆ ದಾವಾ ಸ್ವತ್ತು ಖಾತಾ ಬದಲಾವಣೆ ಆಗಿರುತ್ತದೆ. ಸದರಿ ಖಾತಾ ಬದಲಾವಣೆ ಆದ ಬಗ್ಗೆ ದಾಖಲೆಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ.

ದಾವಾ ಸ್ವತ್ತು ನನ್ನ ಸ್ವಾಧೀನದಲ್ಲಿ ಇರುತ್ತದೆ ಮತ್ತು ಅದಕ್ಕೆ ನಾನು ಸಂಪೂರ್ಣ ಮಾಲೀಕನಾಗಿರುತ್ತೇನೆ. ನನ್ನ ಹೆಸರಿನಲ್ಲಿ ದಾವಾ ಸ್ವತ್ತು ಇರುವ ಬಗ್ಗೆ ಯಾವುದೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಈ ದಾವೆಯನ್ನು ನಾನು ಮತ್ತು ನನ್ನ ತಮ್ಮ ಮಾತ್ರ ಹಾಕಿರುತ್ತೇವೆ. ನಿಪಿ 3 ರ ದಾಖಲೆ ರೇಣುಕ್ಕಮ್ಮ ಅವರ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. ನಿಪಿ 4 ರ ಪ್ರಕಾರ ದಾವಾ ಸ್ವತ್ತು ರೇಣುಕ್ಕಮ್ಮ ಅವರ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. ನಿಪಿ 17 ಮತ್ತು 18 ರ ದಾಖಲೆ ರೇವತಿ ಅವರ ಹೆಸರನಲ್ಲಿ ಇರುತ್ತದೆ ಎಂದರೆ ಸರಿ. ನಿಪಿ 19 ಮತ್ತು 20 ರ ದಾಖಲೆ ರೇಣುಕ್ಕಮ್ಮ ಅವರ ಹೆಸರನಲ್ಲಿ ಇರುತ್ತದೆ ಎಂದರೆ ಸರಿ. ನಾನು ನ್ಯಾಯಾಲಯಲ್ಲಿ ಹಾಜರುಪಡಿಸಿದ ದಾಖಲೆಗಳಲ್ಲಿ ರೇಣುಕ್ಕಮ್ಮ ಮತ್ತು ರೇವತಿ ಹೆಸರನಲ್ಲಿ ಇರುತ್ತದೆ ಮತ್ತು ಅವರನ್ನು ನಾನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ.

ನಿಪಿ 21 ರಲ್ಲಿ ನಾನು ಸರ್ವೆ ನಂಬರ 1402 ಎಂದು ನಮೂದು ಮಾಡಿರುತ್ತೇನೆ ಮತ್ತು ಅದರಲ್ಲಿ ಪ್ರತಿವಾದಿಗಳು ಒತ್ತುವರಿ ಮಾಡಿರುವುದಾಗಿ ಹೇಳಿರುತ್ತೇನೆ ಎಂದರೆ ಸರಿ. ಹೊನ್ನುರಸ್ವಾಮಿ ನನ್ನ ತಮ್ಮನಾಗಬೇಕು. ಹೊನ್ನುರಸ್ವಾಮಿ ಸಹ ನಿಪಿ 21 ರ ಪ್ರಕಾರ ಅರ್ಜಿಯನ್ನು ಕೊಟ್ಟಿದ್ದಾರೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ದಾವಾ ಸ್ವತ್ತಿನ ಪಶ್ಚಿಮ ದಿಕ್ಕಿನ ಕಡೆ ಪ್ರತಿವಾದಿಗಳು ಅಕ್ರಮವಾಗಿ ಮನೆಯನ್ನು ಕಟ್ಟಿಸಿಕೊಂಡಿರುತ್ತಾರೆ ಎಂದು ಹೇಳಿ ಬರೆಸಿರುತ್ತೇನೆ ಎಂದರೆ ಸರಿ. ನಮ್ಮ ದಾವಾ ಸ್ವತ್ತಿನ ಪಶ್ಚಿಮ ದಿಕ್ಕಿನ ಕಡೆ ವಾದಿಗಳ ಮನೆ ಇರುತ್ತದೆ ಎಂದರೆ ಸರಿ. ದಾವಾ ಸ್ವತ್ತಿನ ಪಶ್ಚಿಮದ ಕಡೆ ಪ್ರತಿವಾದಿಗಳ ಮನೆ ಇರುವುದಿಲ್ಲ ಆದರೆ ರಂಗಪ್ಪನ ಮನೆ ಇರುತ್ತದೆ ಎಂದರೆ ಸರಿ. ಆದ್ದರಿಂದ ದಾವಾ ಸ್ವತ್ತಿನ ಪಶ್ಚಿಮ ದಕ್ಕಿನ ಕಡೆ ಪ್ರತಿವಾದಿಗಳು ಒತ್ತುವರಿ ಮಾಡಿರುವುದಿಲ್ಲ ಎಂದರೆ ಸರಿ. ನಾನು ದಾವಾ ಸ್ವತ್ತನ್ನು ಹಾಗೂ ಪ್ರತಿವಾದಿಯವರ ಮನೆಯನ್ನು ಅಳತೆ ಮಾಡಿಸಿರುವುದಿಲ್ಲ. ನಾನು ಪ್ರತಿವಾದಿಯವರು ಪಶ್ಚಿಮ ದಿಕ್ಕಿನ ಕಡೆ 6 ಅಡಿ ಜಾಗವನ್ನು ಒತ್ತುವರಿ ಮಾಡಿ ಕಟ್ಟಿರುವ ಬಗ್ಗೆ ದಾಖಲೆಯನ್ನು ನೋಡಿ

ಹೇಳಿರುತ್ತೇನೆ. 6 ಅಡಿ ಜಾಗವನ್ನು ಒತ್ತುವರಿ ಮಾಡಿ ಪ್ರತಿವಾದಿಗಳು ಮನೆಯನ್ನು ಕಟ್ಟಿರುವ ಬಗ್ಗೆ ನನ್ನ ಬಳಿ ಯಾವುದೆ ದಾಖಲೆಗಳು ಇರುವುದಿಲ್ಲ. 180 ರಲ್ಲಿ 10 ಅಡಿ 181/1 ರಲ್ಲಿ 10 ಅಡಿ ಮನೆಯನ್ನು ಕಟ್ಟಿರುತ್ತೇನೆ.

ಕಚ್ಚಾ ನಕಾಶೆಯಲ್ಲಿ ನಾನು ಅಂದಾಜಿನ ಮೇಲೆ ಕಟ್ಟಡದ ಜಾಗವನ್ನು ತೋರಿಸಿರುತ್ತೇನೆ. ರಲ್ಲಿ ದಕ್ಷಿಣ ದಿಕ್ಕಿನ ಕಡೆ ಬಯಲು ಜಾಗ ಎಂದು ತೋರಿಸಿರುತ್ತೇನೆ ಎಂದರೆ ಸರಿ. ಸದರಿ ಬಯಲು ಜಾಗ 10 ಅಡಿ ಉದ್ದ 21 ಅಡಿ ಜಾಗ ಇರುತ್ತದೆ. ನಮ್ಮ ತಂದೆಯ ತಮ್ಮ ಹನುಮಂತಪ್ಪನ ಮಕ್ಕಳು ಈ ದಾವೆಯ ಪ್ರತಿವಾದಿಗಳು ಅಗಿರುತ್ತಾರೆ. ಪ್ರತಿವಾದಿಯವರು ಡೊರ ನಂಬರ 179 ಒಟ್ಟು ವಿಸ್ತೀರ್ಣ 78 x 30 ಅದರಲ್ಲಿ 46 x 26 ಮನೆಯನ್ನು ಕಟ್ಟಿಕೊಂಡು ವಾಸವಾಗಿದ್ದಾರೆ ಎಂದರೆ ಸರಿ. ದಾವಾ ಮನೆಯ 4 ರಿಂದ 5 ಲಕ್ಷ ಬೆಲೆಬಾಳಬಹುದು. ನಮ್ಮ ತಂದೆಯವರು ಆಗಲ್ಲಿ ನಾವಾಗಲಿ ದಾವಾ ಸ್ವತ್ತಿನ ಮಾಲೀಕರು ನಾವು ಆಗಿರುವುದಿಲ್ಲ ಮತ್ತು ಅದರ ಸ್ವಾಧೀನದಲ್ಲಿ ನಾವು ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ದಾವಾ ಸ್ವತ್ತಿನಲ್ಲಿ ಒತ್ತುವರಿ ಮಾಡಿ ಮನೆ ಕಟ್ಟಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಬರೆದ ವಿಚಾರಗಳು ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ತೋಂದರೆಯನ್ನು ಕೊಡಲು ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ.

ಪ್ರ.ದ.ನ್ಯಾ.ದಂ., ಸಂಡೂರು.